# ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಕುಮಟಾ.

ಸಿ ಸಿ ನಂ 978/2023

ಗಣಪತಿ ಜಟ್ಟಿ ನಾಯ್ಕ

..... ಫಿರ್ಯಾದಿ

ವಿರುದ್ಧ

ಶ್ರೀಧರ ಗಣಪತಿ ಹೆಗಡೆ ...... ಆರೋಪಿ

| | |
|---|---|
| ಆರೋಪಿಯ ಹೆಸರು | – ಶ್ರೀಧರ ಗಣಪತಿ ಹೆಗಡೆ |
| ವಯಸ್ಸು | – ಸುಮಾರು 45 ವರ್ಷ |
| ವಾಸ್ತವ್ಯ | – ಹುಳಸೇಮಕ್ಕಿ, ಮೂರುರು, ತಾಃ ಕುಮಟಾ. |

**ದಿನಾಂಕಃ 16.4.2024**

## ಆಪಾದನೆ

ಆರೋಪಿಯಾದ ನೀವು ಫಿರ್ಯಾದಿಯವರಿಂದ ದಿನಾಂಕಃ 12.10.2021 ರಂದು ರೂ.1,25,000/- ಹಣವನ್ನು ಕೈಗಡವಾಗಿ ಪಡೆದುಕೊಂಡಿದ್ದು, ಸದರಿ ಹಣದ ಮರುಪಾವತಿಗಾಗಿ ಕರ್ನಾಟಕ ಬ್ಯಾಂಕ್ ಲಿ, ಮೂರುರು ಶಾಖೆಯ ಚೆಕ್ ನಂಃ 693736 ನೇದನ್ನು ದಿನಾಂಕಃ 10.02.2023 ರಂದು ರೂ.1,25,000/- ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಫಿರ್ಯಾದಿಯವರು ಸದ್ರಿ ಚೆಕನ್ನು ನಗದೀಕರಣಕ್ಕಾಗಿ ತಮ್ಮ ಖಾತೆ ಇರುವ ಬ್ಯಾಂಕಗೆ ಶಾಖೆಗೆ ಹಾಜರುಪಡಿಸಿದಾಗ ಬ್ಯಾಂಕಿನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಅಂತಾ ಹಿಂಬರಹವನ್ನು ನೀಡಿ ಚೆಕ್‌ನ್ನು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ತಮ್ಮ ವಕೀಲರ ಮೂಲಕ ತಾಃ 12.05.2023 ರಂದು ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸಿಯೂ, ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆಃ 1) ಈಗ ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?
ಉತ್ತರಃ

ಪ್ರಶ್ನೆಃ 2) ನೀವು ಈ ಮೇಲಿನ ಆಪಾದನೆಯನ್ನು ಒಪ್ಪಿಕೂಳ್ಳುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೇ?
ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ. )

Sd/-

**ಪ್ರಧಾನ ಪ್ರ.ದ.ನ್ಯಾ ದಂಡಾಧಿಕಾರಿ,**
**ಕುಮಟಾ.**